# ಪನೆ-ಏತ ನೀರಾವರಿಯ ಸಾಧನ

ಆಧುನಿಕ ತಲೆಮಾರಿಗೆ ಅಜ್ಞಾತವೆನಿಸಿರುವ 'ಪನೆ' ಎಂಬ ಮರದ ಉಪಕರಣವು, ಕರಾವಳಿಯಲ್ಲಿ ಸಾಗುವಳಿಗಾಗಿ ರೂಢಿಯಲ್ಲಿದ್ದ ನೀರೆತ್ತುವ ಮಾನವ ಚಾಲಿತ ಸಾಧನ. ಏತ ಕನ್ನಡ ನಾಮಧೇಯ. ಇಲ್ಲಿ ಕಾಣುತ್ತಿರುವುದು ಮರಾಯಿ (ನೀರು ಮಗುಚುವ ಪೀಪಾಯಿ) ಎಂಬ ಪನೆಯ ಪ್ರಮುಖ ಭಾಗವಾಗಿದೆ. ಸುಮಾರು 2ರಿಂದ 3 ಅಡಿ ಒಳ ವ್ಯಾಸದ ತೆರವನ್ನು ಹೊಂದಿದ್ದು, ನಡುಭಾಗದಲ್ಲಿರುವ ದಂಡನ್ನು ಗರೆ ಎನ್ನುವ ಸುಮಾರು ಮೂರಿಂಚು ವ್ಯಾಸ ಹಾಗೂ ಏಳೆಂಟು ಮೀಟರ್ ಉದ್ದದ ಮರದ ಸಲಾಕೆಗೆ ಕೀಲಿನ ಸಹಾಯದಿಂದ ಸಿಲುಕಿಸುತ್ತಿದ್ದರು. ಗರೆಯನ್ನು ಭೂಮಿಯಿಂದ ಐದಾರು ಮೀಟರ್ ಎತ್ತರದಲ್ಲಿ ಬೆರ್ಮರವೆಂಬ ಅಡ್ಡಲಾಗಿ ನಿರ್ಮಿಸಿರುವ ಬೆನ್ನು ಮರದ ಒಂದು ತುದಿಗೆ ಲಗತ್ತಿಸಲಾಗುತ್ತಿತ್ತು. ಬೆನ್ನು ಮರದ ಇನ್ನೊಂದು ತುದಿಗೆ ಎರಡಿಂಚು ವ್ಯಾಸ ಹಾಗೂ ಸಾಕಷ್ಟು ಉದ್ದನೆಯ ಗಟ್ಟಿಮುಟ್ಟಾದ ಭತ್ತದ ಹುಲ್ಲಿನ 3 ಹಗ್ಗಗಳನ್ನು ನೇತಾಡಿಸಲಾಗುತ್ತಿತ್ತು. ಪನೆ ಕುತ್ತಿ ಎನ್ನುವ ಗಟ್ಟಿ ಕಂಬದ ಮೇಲೆ ಒಟ್ಟೂ ಸಲಕರಣೆ ಆಧಾರಿತವಾಗಿ ನಿಂತಿರುತ್ತದೆ.

ಗರೆ ಹಾಗೂ ಹಗ್ಗಗಳು ಎರಡು ವಿರುದ್ಧ ಕಡೆಗಳಿಂದ ಮೇಲೆ ಕೆಳಗೆ ಹೊಯ್ದಾಡುತ್ತಿದ್ದು ಹಗ್ಗವನ್ನು ಹಿಡಿದು ಆಳುಗಳು ಕೆಳಗೆ ನಿರ್ಮಿಸಿದ ಹೊಂಡಕ್ಕೆ ಜಿಗಿದಾಗ ಕೆರೆ ಅಥವಾ ಬಾವಿಯಿಂದ ನೀರೆತ್ತಿಕೊಂಡು ಈ ಪೀಪಾಯಿ ಮೇಲೆ ಬರುತ್ತಿತ್ತು. ಸನ್ನೆ ಹಾಗೂ ಅನಿಕೆಯ ತಂತ್ರದಲ್ಲಿ ಕಾರ್ಯ ಸಾಗುವ ಇದರಲ್ಲಿ ಕೆಳಗೆ ಕೆರೆಯಿಂದ ನೀರು ತುಂಬಿಸಲು ಮತ್ತು ನೀರು ತುಂಬಿಸಿಕೊಂಡು ಮೇಲೆ ಬಂದಾಗ ಗದ್ದೆಗೆ ಅದನ್ನು ಮಗುಚಿ ಹಾಯಿಸಲು ಇನ್ನೋರ್ವ ಆಳು ಕೆರೆಯ ಮೇಲೆ ಕಟ್ಟಲಾದ 2 ಅಡ್ಡ ಹಲಗೆಗಳ ಮೇಲೆ ಕಾಲುಗಳನ್ನು ಬ್ಯಾಲೆನ್ಸ್ ಮಾಡಿ ನಿಂತು ಕೆಲಸ ಮಾಡುತ್ತಿದ್ದರು. ಹೀಗೆ ಒಟ್ಟು ನಾಲ್ಕಾಳುಗಳ ಪರಿಶ್ರಮದಿಂದ ವಿದ್ಯುತ್ ಸಹಾಯವಿಲ್ಲದೆ ಒಂದು ಪೀಪಾಯಿ ನೀರೆತ್ತಬಹುದಿತ್ತು. ಪಂಪ್‌ಸೆಟ್‌ಗಳು ಈಗ ಈ ಸಾಧನಗಳನ್ನು ಮರೆಮಾಚಿಸಿವೆ.

–ರಮಣ್ ಶೆಟ್ಟಿ ರೆಂಜಾಳ್, ಮುಂಬೈ





# ಕಟ್ಟಡದೊಳಗೆ ಮರವೋ, ಮರದೊಳಗೆ ಕಟ್ಟಡವೋ

ಪಶ್ಚಿಮ ಬಂಗಾಳದ ಕೋಲ್ಕತ್ತದಲ್ಲಿ ಕಂಡುಬಂದ ದೃಶ್ಯವಿದು. ಶಿಥಿಲಗೊಂಡ ಕಟ್ಟಡವೊಂದರ ಗೋಡೆಯಲ್ಲಿಯೇ ದೈತ್ಯವಾಗಿ ಬೆಳೆದ ಮರವನ್ನು ಕಂಡರೆ ಎಂಥವರಿಗೂ ಅಚ್ಚರಿಯಾಗುತ್ತದೆ. ಮನೆಯೇ ಮರದ ಒಂದು ಭಾಗವಾಗಿ ಹೋಗಿದೆ. ಈ ಕಟ್ಟಡದ ಕೆಳಗೆ ಅಂಗಡಿಗಳು ಚಾಲ್ತಿಯಲ್ಲಿದ್ದು, ಅಪಾಯ ಎದುರಾದರೆ ಅಲ್ಲಿರುವ ಎಲ್ಲರಿಗೂ ಸಮಸ್ಯೆ. ಈ ಬಗ್ಗೆ ಗೊತ್ತಿದ್ದರೂ ಅದೇ ಅಂಗಡಿಗಳಲ್ಲಿ ವ್ಯಾಪಾರ ವಹಿವಾಟು ನಡೆಸಲಾಗುತ್ತಿದೆ. ಶಿಥಿಲಗೊಂಡ ಆ ಕಟ್ಟಡದ ಒಳಗೂ ದೀಪ ಬೆಳಗುತ್ತಿರುವುದು ಕಾಣುತ್ತಿತ್ತು. ಇನ್ನೂ ಈ ರೀತಿಯ ಹಲವಾರು ಕಟ್ಟಡಗಳು ಕೋಲ್ಕತ್ತ ನಗರದ ಮಧ್ಯಭಾಗದಲ್ಲಿ ಸಾಮಾನ್ಯವಾಗಿ ಕಂಡುಬಂದವು.

–ಅಂಬಿಕಾ ರಾವ್, ಬೆಂಗಳೂರು





